

**ಪರ್ಫೆಕ್ಟ್ ಬಾಡಿ ಎಂಬುದೇ ಒಂದು ಮಿಥ್ಯೆ. ಆದರೆ ಈ ಮಿಥ್ಯೆಯ ಹಿಡಿಯಹೊರಟು ಬಳಲಿದವರಿಗೆ ಲೆಕ್ಕವಿಲ್ಲ. ಸುತ್ತಲಿನ ಸಮಾಜ, ಬಂಡವಾಳಶಾಹಿ ವ್ಯವಸ್ಥೆ, ಅನ್ಯರಲ್ಲಿ ಹುಳುಕು ಹುಡುಕುವ ಮನುಷ್ಯನ ಮೂಲಭೂತ ಪ್ರವೃತ್ತಿ  ಈ ಎಲ್ಲವೂ ಈ ಕಾಯರಾಜಕಾರಣದ ಹಿಂದೆ ಇದೆ. ಪರ್ಫೆಕ್ಟ್ ಎನ್ನುವುದೇ ಸಾಪೇಕ್ಷವಾಗಿರುವಾಗ, ಇರುವುದೆಲ್ಲವ ಬಿಟ್ಟು ಆದರ ಹಿಂದೆ ಬೀಳುವ ಹಟ ಯಾಕೆ?**

ಅವರು ದೇಹದ ಪ್ರಮಾಣ ಹೀಗೆಯೇ ಇರಬೇಕು ಎನ್ನುವ ಒತ್ತಡವನ್ನು ಎದುರಿಸಲಿಲ್ಲ. ಬಹುಶಃ ಈ ಅಸಹಜ ನಿರೀಕ್ಷೆಗಳ ಮುನ್ಸೂಚಿಯಾಗಿ ಬಂದದ್ದು ಬಾರ್ಬಿ ಗೊಂಬೆಗಳು. ಅದರ ಮಾರ್ಕೆಟಿಂಗ್ ಎಷ್ಟು ಪ್ರಭಾವಶಾಲಿಯಾಗಿ ಇತ್ತೆಂದರೆ ಜಗತ್ತಿನ ಬಹುಪಾಲು ಹೆಣ್ಣುಮಕ್ಕಳ ಸೌಂದರ್ಯ ಮೀಮಾಂಸೆಯ ಸೂತ್ರಗಳೇ ಬದಲಾಗಿ ಹೋದವು. ಹೊಂಗೂದಲು, ಹೊಳೆವ ಬಿಳಿಕೆಂಪು ಬಣ್ಣ, ಎತ್ತರದ ಎದೆ, ಪುಟಾಣಿ ಸೊಂಟ, ನೀಳವಾದ ಕಾಲುಗಳು... ಇದು ಯಾವುದೇ ಹೆಂಗಸಿಗಿರಲಿ, ಹುಡುಗಿಗೂ ಅಸಾಧ್ಯವಾದ ಹಲವು ಸವಾಲುಗಳನ್ನೆಸೆದಿತ್ತು. ನಂತರ ಆ ಕಂಪನಿಗೆ ಬುದ್ಧಿ ಬಂದು, ಎಲ್ಲಾ ಜನಾಂಗಗಳ ಹೆಣ್ಣುಮಕ್ಕಳ ಪ್ರತಿನಿಧೀಕರಣ ಅಲ್ಲಿ ಸಿಗುವುದರೊಳಗೆ ಆಗಬಾರದ ಹಾನಿ ಆಗಿಹೋಗಿತ್ತು. ಜೊತೆಗೆ ಸೌಂದರ್ಯವರ್ಧಕ ಕಂಪನಿಗಳು ಕೋಟಿ ಕೋಟಿ ಡಾಲರ್‌ಗಳನ್ನು ಮಾರುಕಟ್ಟೆಗೆ ಸುರಿದು ಇಂತಹುದೇ ಇನ್ನೊಂದು ಸುಲಭಸಾಧ್ಯವಲ್ಲದ ಸೌಂದರ್ಯದ ಕಲ್ಪನೆಯನ್ನು ನಮ್ಮ ಮುಂದಿಟ್ಟು, ಆ ಕಲ್ಪನೆ ಸಾಕಾರವಾಗಬೇಕಾದರೆ ನಮ್ಮ ಇಂತಿಂತಹ ಪ್ರಸಾಧನಗಳನ್ನು, ಹೀಗೆಹೀಗೆ ಬಳಸಿ ಎಂದು ಮತ್ತಷ್ಟು ಆಮಿಷಗಳನ್ನು ತಲೆಗೆ ತುಂಬುವ ಕೆಲಸ ಮಾಡಿಯಾಗಿತ್ತು. ಪ್ರತಿ ಹೆಣ್ಣಿನ ಗುರಿ ಆ 'ಮಾದರಿ' ಶರೀರವನ್ನು ಹೊಂದುವುದು ಎನ್ನುವಂತೆ ಆಗಿಹೋಗಿತ್ತು.